


**ರೋಮ್ಯಾಂಟಿಕ್ ಸಿನಿಮಾಗಳಿಗೆ ಹಳೆಯದ್ದೊಂದು ಸೂತ್ರವಿದೆ. ಅದನ್ನು ಕಿತ್ತು, ತಮ್ಮದೇ ಭಾವದ ಹೂಗಳನ್ನು ಕಟ್ಟಿದ್ದಾರೆ ನಿರ್ದೇಶಕ ಸಿ. ಪ್ರೇಮ್ ಕುಮಾರ್. '96' ತಮಿಳು ಸಿನಿಮಾ ಭಗ್ನಪ್ರೇಮಿಗಳಿಬ್ಬರ ಸಹೃದಯಿ ಆತ್ಮಸಂವಾದವಾಗಿ ಎದೆಗಿಳಿಯುತ್ತದೆ. ಅಲ್ಲಿ ಒಲವಿದೆ, ನವಿರಿದೆ, ನಲಿವಿದೆ. ಮಡುಗಟ್ಟಿದ ವಿಷಾದವೂ ಇದೆ. ಎಲ್ಲವುಗಳ ಮೇಲೆ ಸಂಗೀತದ ತಂಗಾಳಿ.**

ಹಲ್ಲುಕಿರಿದು, ಮಳೆಹನಿಗೆ ತನ್ನ ಮುಖವನ್ನು ಮುದ್ದಿಸಗೊಡುವ ಪ್ರವಾಸಿ ಫೋಟೊಗ್ರಾಫರ್. ಮರುಭೂಮಿಯ ಮರಳ ಮೇಲೆ ಅವನ ಜಾರಾಟ. ಸಾಗುವ ರೈಲಿನ ಕಿಟಕಿಯಿಂದ ಹೊರಜಗತ್ತನ್ನು ದಿಟ್ಟಿಸುತ್ತಾ, ತನ್ನನ್ನು ತಾನೇ ಬೇರೆಯವನಾಗಿ ನೋಡುತ್ತೇನೆ ಎಂದು ಕೇಳಿಸುವ ಸ್ವಗತದ ಸಾಲುಗಳು. ತಳ್ಳುಗಾಡಿ ಎಳೆಯುವಾತನನ್ನು ಪಕ್ಕಕ್ಕೆ ನಿಲ್ಲಿಸಿ, ತಾನೇ ಗಾಡಿ ಎಳೆಯುತ್ತಾ ಅವನನ್ನು ಮಾತಿಗೂ ಎಳೆಯುವ ಹೃದಯವಂತಿಕೆ. ಬಾಯಲ್ಲಿ ಬ್ರೆಡ್ಡಿನ ತುಂಡು ಇಟ್ಟುಕೊಂಡು, ಅದನ್ನು ತಿನ್ನುವಂತೆ ಜಿಂಕೆಯೊಂದಕ್ಕೆ ಪುಸಲಾಯಿಸುವ ಜೀವಂತಿಕೆಯ ವ್ಯಕ್ತಿ. ನೀರ ನಡುವಿನ ಕಟ್ಟೆ ಮೇಲೆ ಹಳೆಯ ಯೋಚನೆಗಳ ಅಲೆಯೆಬ್ಬಿಸಿಕೊಂಡು ಕೂತಿರುವಾಗಲೇ, ದಿಢೀರನೆ ಈಜಲು ಅದೇ ಕಟ್ಟೆ ಮೇಲೆ ನೆಗೆದು ಪೋರ ಮುನ್ನುಗ್ಗಿದಾಗ ಧ್ಯಾನಭಂಗವಾದ ಭಾವ.